**0405/0804**

# Fourth Semester Three Year LL.B./Eighth Semester Five Year B.A./B.B.A. LL.B. Examination, June 2013
# RIGHT TO INFORMATION ACT

Duration : 3 Hours | Max. Marks : 100

**Instructions** : 1. Answer all **5** questions.
2. Figures to the right indicate marks.
3. Answers should be written **either** in English or Kannada **completely**.

## UNIT – I

Q. No. 1. (a) Discuss the historical development of the Right to Information Act, 2005 in India. Marks : 15

ಭಾರತದಲ್ಲಿ ಮಾಹಿತಿ ಹಕ್ಕು ಕಾಯ್ದೆ, 2005 ರ ಐತಿಹಾಸಿಕ ಬೆಳವಣಿಗೆಯನ್ನು ಚರ್ಚಿಸಿ.

OR/**ಅಥವಾ**

'Informed citizenry and transparency are the essentials of democracy' elucidate.

'ಮಾಹಿತಿ ಹೊಂದಿರುವ ಪ್ರಜೆಗಳು ಮತ್ತು ಪಾರದರ್ಶಕತೆ ಪ್ರಜಾಪ್ರಭುತ್ವದ ಅವಶ್ಯಕತೆಗಳಾಗಿವೆ' ವಿಷದೀಕರಿಸಿ.

(b) Write a note on 'Mazdoor Kissan Shakti Sanghatan'. Marks : 5

'ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ' ಯ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Write a note on Freedom of Information Act, 2002.

ಮಾಹಿತಿ ಸ್ವಾತಂತ್ರ್ಯ ಕಾಯ್ದೆ, 2002 ರ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – II

Q. No. 2. (a) What is right to information under the Right to Information Act ? State the difference between public authority and competent authority. Marks : 15

ಮಾಹಿತಿ ಹಕ್ಕು ಕಾಯ್ದೆಯನ್ವಯ ಮಾಹಿತಿ ಹಕ್ಕು ಎಂದರೇನು ? ಸಾರ್ವಜನಿಕ ಪ್ರಾಧಿಕಾರ ಮತ್ತು ಸಕ್ಷಮ ಪ್ರಾಧಿಕಾರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

OR/**ಅಥವಾ**

'All public authorities have to ordinarily disclose information sought by the applicant'. State the exceptions.

'ಅರ್ಜಿದಾರರು ಕೋರಿದ ಎಲ್ಲಾ ಮಾಹಿತಿಗಳನ್ನು, ಸಾರ್ವಜನಿಕ ಪ್ರಾಧಿಕಾರವು ಸಾಮಾನ್ಯವಾಗಿ ಒದಗಿಸಬೇಕು'. ಅಪವಾದಗಳನ್ನು ತಿಳಿಸಿರಿ.

(b) State the provisions relating to Suo moto disclosure by the public authority. Marks : 5

ಸಾರ್ವಜನಿಕ ಪ್ರಾಧಿಕಾರವು ತಾನಾಗಿಯೇ ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ತಿಳಿಸಿ.

OR/**ಅಥವಾ**

An illiterate person wants to seek some information from a public authority. He insists that the public information officer has to reduce his request in to writing. Is Public Information Officer bound to oblige ?

ಅನಕ್ಷರಸ್ಥ ವ್ಯಕ್ತಿಯೊಬ್ಬನು ಸಾರ್ವಜನಿಕ ಪ್ರಾಧಿಕಾರವೊಂದರಿಂದ ಕೆಲವು ಮಾಹಿತಿಯನ್ನು ಪಡೆಯಲಿಚ್ಛಿಸುತ್ತಾನೆ. ಆತನು ತನ್ನ ಬೇಡಿಕೆಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯು ಬರೆದುಕೊಡಬೇಕೆಂದು ಆಗ್ರಹಿಸುತ್ತಾನೆ. ಸಾರ್ವಜನಿಕ ಮಾಹಿತಿ ಅಧಿಕಾರಿಯು ಇದನ್ನು ಬರೆದುಕೊಳ್ಳಲು ಬಾಧ್ಯನೇ ?

## UNIT – III

Q. No. 3. (a) State the provisions of Right to Information Act regarding the constitution, powers and functions of the Central Information Commission. Marks : 15

ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಂದ್ರ ಮಾಹಿತಿ ಆಯೋಗದ ರಚನೆ, ಅಧಿಕಾರಿಗಳು ಮತ್ತು ಪ್ರಕಾರ್ಯಗಳಿಗೆ ಸಂಬಂಧಿಸಿದ ಅನುಬಂಧಗಳನ್ನು ತಿಳಿಸಿರಿ.

OR/**ಅಥವಾ**

Discuss various punishments provided under the Right to Information Act with special reference to the power of the commission to award compensation.

ಮಾಹಿತಿ ಹಕ್ಕು ಕಾಯ್ದೆಯಡಿ, ಮಾಹಿತಿ ಆಯೋಗದ ನಷ್ಟಭರ್ತಿ ಆದೇಶಕ್ಕೆ ಒತ್ತುಕೊಟ್ಟಂತೆ, ಕಾಯ್ದೆಯಡಿ ಕೊಡ ಮಾಡಿರುವ ವಿವಿಧ ಬಗೆಯ ಶಿಕ್ಷೆಗಳನ್ನು ಚರ್ಚಿಸಿ.

(b) Write a note on first Appellate Authority and Second Appeal. Marks : 5

ಮೊದಲನೇ ಮೇಲ್ಮನವಿ ಪ್ರಾಧಿಕಾರ ಮತ್ತು ಎರಡನೇ ಮೇಲ್ಮನವಿಗಳ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Mr. 'X' filed a complaint to the commission against a public information officer for non-disclosure of information. Commission rejected his application with a direction to approach the first appellate authority. Advice the complaint.

'X' ಎಂಬುವವರು ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿರುದ್ಧ ಮಾಹಿತಿ ಒದಗಿಸಲಿಲ್ಲವೆಂಬ ಕಾರಣಕ್ಕಾಗಿ ಮಾಹಿತಿ ಆಯೋಗಕ್ಕೆ ದೂರನ್ನು ಸಲ್ಲಿಸಿದ್ದರು. ಮಾಹಿತಿ ಆಯೋಗವು ದೂರನ್ನು ತಿರಸ್ಕರಿಸಿ ಮೊದಲನೇ ಮೇಲ್ಮನವಿ ಪ್ರಾಧಿಕಾರವನ್ನು ಸಂಪರ್ಕಿಸಲು ಆದೇಶಿಸುತ್ತದೆ. ದೂರುದಾರನಿಗೆ ಸಲಹೆ ನೀಡಿ.

## UNIT – IV

Q. No. 4. (a) Examine the salient features of the Public Records Act, 1993. Marks : 15

'ಸಾರ್ವಜನಿಕ ಅಭಿಲೇಖ ಅಧಿನಿಯಮ, 1993 ರ ಪ್ರಮುಖ ಲಕ್ಷಣಗಳನ್ನು ಪರಿಶೀಲಿಸಿ.

OR/**ಅಥವಾ**

Examine the provisions relating to Constitution, powers and functions of inquiry commission under the Commission of Inquiry Act, 1952.

ವಿಚಾರಣಾ ಆಯೋಗ ಅಧಿನಿಯಮ, 1952 ರ ಅಡಿಯಲ್ಲಿ ವಿಚಾರಣಾ ಆಯೋಗದ ರಚನೆ, ಅಧಿಕಾರ ಮತ್ತು ಪ್ರಕಾರ್ಯಗಳನ್ನು ಪರಿಶೀಲಿಸಿ.

(b) Write a note on Official Secrets Act, 1923. Marks : 5

ಅಧಿಕಾರ ಗೌಪ್ಯತೆ ಕಾಯ್ದೆ, 1923 ರ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

A research scholar of a university requests state archive for some 'classified and permanent documents' for research purpose. Is he entitled to get the same ? If so, how ?

ವಿಶ್ವವಿದ್ಯಾಲಯವೊಂದರ ಸಂಶೋಧನಾ ವಿದ್ಯಾರ್ಥಿಯು ಸಂಶೋಧನಾ ಅಧ್ಯಯನಕ್ಕಾಗಿ ರಾಜ್ಯ ಪತ್ರಾಗಾರದಿಂದ ಕೆಲವು 'ವರ್ಗೀಕೃತ ಮತ್ತು ಶಾಶ್ವತ ' ದಾಖಲೆಗಳನ್ನು ಕೊರುತ್ತಾನೆ. ಈತನು ಅವುಗಳನ್ನು ಪಡೆಯಲು ಅರ್ಹನೇ ? ಹೌದಾದರೆ ಹೇಗೆ ?

## UNIT – V

Q. No. 5. (a) What is meant by 'best practices' ? Is citizens charter a best practice ? Marks : 15

ಅತ್ಯುತ್ತಮ ಆಚರಣೆಗಳು ಎಂದರೇನು ? 'ಪೌರ ಸನ್ನದು' ಒಂದು ಅತ್ಯುತ್ತಮ ಆಚರಣೆಯೇ ?

OR/**ಅಥವಾ**

Explain the best practices adopted by some of the Central Government Departments.

ಕೇಂದ್ರ ಸರ್ಕಾರದ ಕೆಲವು ಇಲಾಖೆಗಳು ಅನುಸರಿಸುತ್ತಿರುವ ಕೆಲವು ಅತ್ಯುತ್ತಮ ಆಚರಣೆಗಳನ್ನು ವಿವರಿಸಿ.

(b) An applicant seeks information from a housing co-operative society regarding the list of allottees of sites. The housing society refuses to divulge information stating that it is not a public authority as per the Right to Information Act. Advice the applicant. Marks : 5

ಅರ್ಜಿದಾರರೊಬ್ಬರು ಗೃಹ ನಿರ್ಮಾಣ ಸಹಕಾರ ಸಂಘವೊಂದರಿಂದ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಮಾಹಿತಿ ಕೋರುತ್ತಾನೆ. ಮಾಹಿತಿ ಹಕ್ಕು ಕಾಯ್ದೆಯನ್ವಯ ಗೃಹ ನಿರ್ಮಾಣ ಸಹಕಾರ ಸಂಘವು ತಾನು ಸಾರ್ವಜನಿಕ ಪ್ರಾಧಿಕಾರವಲ್ಲವೆಂದು ಮಾಹಿತಿಯನ್ನು ನೀಡಲು ನಿರಾಕರಿಸುತ್ತದೆ. ಅರ್ಜಿದಾರರಿಗೆ ಸಲಹೆ ನೀಡಿ.

OR/**ಅಥವಾ**

Write a note on the responsibility of the 'Appropriate Government' to propagate the Right to Information Act.

ಮಾಹಿತಿ ಹಕ್ಕು ಕಾಯ್ದೆಯನ್ನು ಪ್ರಚುರಪಡಿಸುವಿಕೆಯಲ್ಲಿ ಸಕ್ಷಮ ಸರ್ಕಾರದ ಹೊಣೆಗಾರಿಕೆಯನ್ನು ಕುರಿತು ಟಿಪ್ಪಣಿ ಬರೆಯಿರಿ.